

**ವೆಂಕಟೇಶ ಮಾಚಕನೂರ**

ಕಲೆ: ಸಂತೋಷ್ ಸಸಿಹಿತ್ಲು



# ತಪಸ್ಸು, ದೇವರು ಮತ್ತು ವರ

ನನಗೆ ಆಗಾಗ ತಪಸ್ಸು ಮಾಡಬೇಕು, ಉಗ್ರ ತಪಸ್ಸು ಮಾಡಬೇಕು, ನನಗೆ ಕಾಡುವ ಸಮಸ್ಯೆಗಳನ್ನು ದೇವರಿಂದ ವರ ಪಡೆದು ಪರಿಹರಿಸಿಕೊಳ್ಳಬೇಕು ಎಂದು ಅನಿಸುವುದುಂಟು. ತಮಗೂ ಒಮ್ಮೊಮ್ಮೆ ಹಾಗೆ ಅನಿಸುತ್ತಿರಬಹುದು ಅಲ್ಲವೇ? ಆದರೆ, ತಪಸ್ಸು ಮಾಡುವ ತಾಪತ್ರಯದಿಂದಾಗಿ ತಾವು ಆ ಕುರಿತು ಹೆಚ್ಚು ಚಿಂತಿಸುತ್ತಿರಲಿಕ್ಕಿಲ್ಲ. ಯಾವ ತೊಂದರೆ ತಾಪತ್ರಯಗಳಿಲ್ಲದಿದ್ದಲ್ಲಿ ದೇವರ ನೆನಪಾದರೂ ಎಲ್ಲಿ ಆಗುತ್ತದೆ. ಒಳ್ಳೆಯ ಆರಾಮದಾಯಕ ಜೀವನವನ್ನು ತಾವು ನಡೆಸುತ್ತಿದ್ದಲ್ಲಿ, ಅದು ಇನ್ನೂ ಆರಾಮದಾಯಕ ನಿವೃತ್ತ ಜೀವನ ಸಾಗಿಸುತ್ತಿದ್ದಲ್ಲಿ ತಪಸ್ಸಿನಂತಹ ದೇಹದಂಡನೆಯ ಶ್ರಮ ಯಾರಿಗೆ ಬೇಕು? ಮಡದಿ, ಮಕ್ಕಳು, ಮೊಮ್ಮಕ್ಕಳು ಎಂದು ದೇಶ- ವಿದೇಶಗಳನ್ನು ಸುತ್ತುತ್ತಾ ಹಳೆಯ ಗೆಳೆಯರೊಂದಿಗೆ ರಸಮಯ ಸಂಜೆಗಳನ್ನು ಕಳೆಯುತ್ತಿರುವಾಗ ದೇವರು, ತಪಸ್ಸು, ವರ ಎಂಬ ಯೋಚನೆಗಳು ಕೂಡ ಸಮೀಪ ಸುಳಿಯುವುದಿಲ್ಲ. ವೃತ್ತಿ ಜೀವನದಲ್ಲಿ ಮುಳುಗಿರುವಾಗ ತಪಸ್ಸಿನಂತಹ ಆಲೋಚನೆಗಳು ತಲೆಯಲ್ಲಿ ಬರುವುದಿಲ್ಲ. ಆಗ ದುಡಿಯುವುದು, ಗಳಿಸುವುದು, ಮಡದಿ-ಮಕ್ಕಳ ಯೋಗಕ್ಷೇಮವೇ ನಮ್ಮನ್ನು ಆವರಿಸಿಕೊಂಡು ಬಿಟ್ಟಿರುತ್ತದೆ. ತಪಸ್ಸು ಮತ್ತೊಂದು ಕುರಿತು ವ್ಯವಧಾನಕ್ಕೆ ಆಸ್ಪದವೇ ಇರುವುದಿಲ್ಲ. ಆದರೆ ವಯಸ್ಸಾದ ಮೇಲೆ, ಸುತ್ತಲಿನ ಸಮಾಜವನ್ನು, ದೇಶದ ಮತ್ತು ಜಾಗತಿಕ ವಿಕ್ಷಿಪ್ತ ವಿದ್ಯಮಾನಗಳನ್ನು ನಿತ್ಯವೂ ಮಾಧ್ಯಮಗಳಲ್ಲಿ ನೋಡುತ್ತಿದ್ದಂತೆ ಇವುಗಳಿಗೆಲ್ಲ ಏನಾದರು ಮಾಡಬೇಕು, ತಪಸ್ಸು ಮಾಡಿ ದೇವರನ್ನು ಒಲಿಸಿಕೊಂಡು ಇಂಥವುಗಳಿಗೆಲ್ಲ ಅಂತ್ಯ ಹಾಡಬೇಕು ಎಂಬ ವಿಚಾರಗಳು ತಲೆಯಲ್ಲಿ ಸುಳಿದಾಡತೊಡಗುತ್ತವೆ. ಎಲ್ಲರಿಗೂ ಅಲ್ಲದಿರಬಹುದು. ಆದರೆ, ನನ್ನಂಥವರಿಗೆ ಅಂತಹ ವಿಚಾರಗಳು ಮೇಲಿಂದ ಮೇಲೆ ಬರುತ್ತಿರುತ್ತವೆ.

ನಾವು ದೇವಾಲಯಗಳಿಗೆ ಹೋಗುವುದು ಏತಕ್ಕೆ? ದೇವರಿಂದ ಏನಾದರೂ ಕೇಳಿ ಪಡೆಯಲಿಕ್ಕಲ್ಲವೇ? ಹಾಗೆ ದೇವಾಲಯಗಳಿಗೆ ಹೋಗಿ ಕೈಮುಗಿದು ಬಂದರೆ ಅಥವಾ ಪೂಜೆ ಮಾಡಿ, ಕಾಣಿಕೆ ಸಲ್ಲಿಸಿ ಬಂದರೆ ನಮ್ಮ ಬೇಡಿಕೆಗಳು